ಅಮರಯ್ಯ ಪತ್ರಿಮಠ, ಸುರಪುರ
◆ ಎರಡು ಜಡೆಗಳು ಒಂದಾಗೋದು ಯಾವಾಗ?



ಬ್ಯೂಟಿ ಪಾರ್ಲರಿನವಳು ಎರಡೂ ಕತ್ತರಿಸಿದ ಜಡೆಗಳನ್ನು ಒಟ್ಟಿಗೆ ಡಸ್ಟ್ ಬಿನ್‌ಗೆ ಹಾಕಿದಾಗ.

ಟಿ.ಎಂ. ಮಾನಪ್ಪ, ಶಿವಮೊಗ್ಗ
◆ ಬೆಂಕಿಗೂ, ನೀರಿಗೂ ಎಂತಹ ಬಾಂಧವ್ಯ?
ಬೆಂಕಿಗೆ ಬಿಸಿಯೆನಿಸಿದಾಗ ನೀರು; ನೀರಿಗೆ ಚಳಿಯೆನಿಸಿದಾಗ ಬೆಂಕಿ; ಪರಸ್ಪರ ಹಿತ ನೀಡುವ ಶ್ರೇಷ್ಠ ಬಾಂಧವ್ಯ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
◆ ಕಾಯಿಸಿದ ಕಬ್ಬಿಣಕ್ಕೂ, ಪ್ರಾಯದ ಹೆಣ್ಣಿಗೂ ಏನು ವ್ಯತ್ಯಾಸ?
ಕಬ್ಬಿಣ ಬಾಗುತ್ತದೆ, ಹೆಣ್ಣು ಬೀಗುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು
◆ ನಿಂಬೆಹಣ್ಣನ್ನು ನಿಷೇಧಿಸಿದ್ದೇ ಸರಕಾರಕ್ಕೆ ಮುಳುವಾಯಿತೆ?



ಸರಕಾರಕ್ಕೆ ಮುಳುವಾದುದು ನಿಂಬೆಹಣ್ಣಲ್ಲ, 'All ಮೊಂಡು'ಗಳನ್ನೂ ಕಲೆಹಾಕಿ 'ಸಿದ್ದ'ಪಡಿಸಿದ ಬಾದಾಮಿ.

ಫಾಲನೇತ್ರ ಸಜ್ಜನ, ಶಿರಸಿ
◆ ಮೋದಿ ಅನ್ನೋ ಹೆಸರಿನಲ್ಲಿ ಏನಿದೆ?
ಬೆಂಬಲಿಗರ ಪ್ರಕಾರ ಮೋದದ ದಿನಗಳು; ವಿರೋಧಿಗಳ ಪ್ರಕಾರ ಮೋಸದ ದಿನಗಳು.

ದಿನೇಶ್, ಗುಡ್ಡದೂರು
◆ ಇಂದಿನ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಪ್ರಭುಗಳು. ರಾಜಕಾರಣಿಗಳು?
ಆ ಪ್ರಜೆಗಳನ್ನು ಹೊತ್ತೊಯ್ಯುವ ಚಟ್ಟಗಳು.

ರಮೇಶ್, ಹನುಮನಾಳು
◆ ಬಡವರ ಮನೆಯ ಊಟ ಚೆಂದ ಅನ್ನುತ್ತಾರೆ. ಕರೆದರೆ ಬರುವುದಿಲ್ಲ. ಏಕೆ ರಾಮ್?
ಹೋಗಿ ಬಕಾಸುರನಂತೆ ಉಂಡು ಅವರನ್ನು ಮತ್ತಷ್ಟು ಬಡವರನ್ನಾಗಿಸುವುದು ಬೇಡವೆಂಬ ಸದಿಚ್ಛೆ.

ಪೇಂಟರ್ ಪಾಪು, ಸಂತೇಮರಹಳ್ಳಿ
◆ ಕಷ್ಟದ ಪರಿಸ್ಥಿತಿ ಬಂದಾಗ ಮನಸ್ಥಿತಿಯನ್ನು ನಿಭಾಯಿಸುವುದು ಹೇಗೆ?
ಕಣ್ಣಿಲ್ಲದಿರುವುದಕ್ಕಿಂತ ಗಾಗಲ್ಸ್ ಇಲ್ಲದಿರುವುದು ವಾಸಿ ಎಂದು ನೆನೆಸಿಕೊಳ್ಳಿ.

ಶ್ರೀನಿವಾಸ ಪದಕಿ, ಮುಂಬಯಿ
◆ ಬೈ ಒನ್ ಗೆಟ್ ಒನ್ ಫ್ರೀ ಸ್ಕೀಮು ಮದುವೆಗೂ ಅನ್ವಯವಾದರೆ ಹೇಗೆ ಗುರು?
ನೀವು ನಕುಲನೋ, ಸಹದೇವನೋ ಆಗಲು ಒಪ್ಪಿದರೆ ದ್ರೌಪದಿ ರೆಡಿಯಂತೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
◆ ಜ್ಞಾನಕ್ಕೆ ಸಮನಾದುದು ಯಾವುದು?
ಅನುಭವ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
◆ ಮನುಷ್ಯನಿಗೆ ಚಿರಯೌವನವೇ ಸದಾ ಉಳಿದರೆ ಹೇಗೆ ಸಾರ್?
ಹಣ್ಣೇ ಆಗದ ಹೀಚು ಇದ್ದರೇನು ಬಿಟ್ಟರೇನು!

ತೂರಗಲ್ಲ ಉಮೇಶ, ರಾಮದುರ್ಗ
◆ ನನ್ನ ಗೆಳೆಯ ಎರಡು ಲಕ್ಷ ಪಗಾರ ತಂದರೂ ಅವನ ಹೆಂಡತಿ ಎಲ್ಲ ಕೆಲಸ ಅವನಿಗೇ ಹಚ್ಚುತ್ತಾಳಲ್ಲಾ...?
ಸರಿಯೇ. ಎರಡು ಲಕ್ಷದಷ್ಟು ಆನ್‌ಲೈನ್ ಶಾಪಿಂಗ್ ಮಾಡಬೇಕಾದುದರಿಂದ ಆಕೆಗೆ ಬಿಡುವಿರುವುದಿಲ್ಲ.

ರುದ್ರಮೂರ್ತಿ ಎಂ.ಜೆ. ಗಾರೆಹಟ್ಟಿ
◆ ವಂಶಾಭಿವೃದ್ಧಿಗೆ ಗಂಡು ಮುಖ್ಯವೋ, ಹೆಣ್ಣೋ?
ಸಂತಾನಾಭಿವೃದ್ಧಿಗಾದರೆ ಹೆಣ್ಣು; ವಂಶಾಭಿವೃದ್ಧಿಗಾದರೆ ಗುಣವಂತ ವಾತಾವರಣ.

## ಬಹುಮಾನಿತ ಪ್ರಶ್ನೆ

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ
◆ ಆದಿಮಾನವರಿಗೂ, ತಂತ್ರಜ್ಞಾನದ ಮಾನವರಿಗೂ ವ್ಯತ್ಯಾಸವಾಗದ ಒಂದು ಅಪೂರ್ವ ಗುಣ ಯಾವುದು?
ಹೊಸ ಹೊಸ ದೃಶ್ಯಗಳ, ವಿಷಯಗಳ ಬಗ್ಗೆ ಕುತೂಹಲ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
◆ ವೈದ್ಯರು ಮಾಡುವ ಆಪರೇಷನ್‌ಗಿಂತ ರಾಜಕಾರಣಿಗಳು ಮಾಡುವ ಆಪರೇಷನ್ ಹೆಚ್ಚು ಜನಪ್ರಿಯವಾಗುತ್ತೆ. ಏಕೆ?
ವೈದ್ಯರದು ಕೇವಲ ರಕ್ತರಂಜಿತ. ರಾಜಕಾರಣಿಯದು ವರ್ಣಮಂಡಿತ, ವರ್ಣರಂಜಿತ, ವರ್ಣನಾಭರಿತ.

ದ್ವಾರಕಾನಾಥ್, ಬೆಂಗಳೂರು
◆ ನಾನು ಸಾಕಿದ್ದ ಅಳಿಲನ್ನು ಬೆಕ್ಕು ತಿಂದಿತು. ನನಗೀಗ ಅಳಿಲನ್ನು ಬಲಿ ಕೊಟ್ಟ ಪಾಪವೋ, ಬೆಕ್ಕಿಗೆ ಆಹಾರವಿತ್ತ ಪುಣ್ಯವೋ?



'ಒಂದಕ್ಕೆ ಭಕ್ಷ್ಯ, ಒಂದಕ್ಕೆ ಮೋಕ್ಷ ನೀಡಿದ್ದರಿಂದ ಡಬ್ಬಲ್ ಪುಣ್ಯ' ಎಂದಿತು ಕಟುಕರ ಸಂಘ.

ಹಾಡ್ಯ ಬ. ಜಯಾನಂದ, ಮೈಸೂರು
◆ ಮದುವೆಗಳಲ್ಲಿ ತಾಳಿ ಕಟ್ಟುವಾಗ ಗಟ್ಟಿಮೇಳ ಯಾಕೆ?
ವಾಟ್ಸ್ಆ್ಯಪ್, ಎಫ್‌ಬಿ, ಟ್ವಿಟರ್‌ಗಳಲ್ಲಿ ಮುಳುಗಿದವರನ್ನು ಹೊರಪ್ರಪಂಚಕ್ಕೆ ತರಬೇಕಲ್ಲ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
◆ ಹೆಣ್ಣಿಗೆ ಚಿನ್ನದ ವ್ಯಾಮೋಹ ಸಂಪೂರ್ಣವಾಗಿ ಕಡಿಮೆಯಾಗುವುದು ಯಾವಾಗ ಸಾರ್?
ಡೈಮಂಡ್, ಪ್ಲಾಟಿನಮ್ ವ್ಯಾಮೋಹ ಶುರುವಾದ ತಕ್ಷಣ.

■ ರಾಮ್